

‘ದಿ ಬಿಎಫ್‌ಜಿ’ ಚಿತ್ರದ ದೃಶ್ಯಗಳು

ರೈಲೆನ್ಸ್ ಅದ್ಭುತವಾಗಿ ನಟಿಸಿದ್ದಾರೆ. ‘ಮಾರ್ಕ್ ಒಬ್ಬ ಅದ್ಭುತ ನಟ. ಪಾತ್ರದೊಂದಿಗೆ ರೂಪಾಂತರಗೊಳ್ಳುವ ಕಲಾವಿದ’ ಎನ್ನುವ ಸ್ಪಿಲ್‌ಬರ್ಗ್ ಮೆಚ್ಚುಗೆಯ ವ್ಯಕ್ತರೂಪದಂತೆ ಬಿಎಫ್‌ಜಿ ಪಾತ್ರ ನಿರ್ವಹಣೆ ಕಾಣಿಸುತ್ತದೆ.

ಮಕ್ಕಳ ಸಿನಿಮಾವೊಂದು ಹೇಗಿರಬೇಕು ಎನ್ನುವುದಕ್ಕೆ ಮಾದರಿಯಾಗಿಯೂ ‘ದಿ ಬಿಎಫ್‌ಜಿ’ ಚಿತ್ರವನ್ನು ನೋಡಬಹುದು. ಮಕ್ಕಳ ಸಿನಿಮಾಗಳ ಲೇಬಲ್‌ನಲ್ಲಿ ರೂಪುಗೊಳ್ಳುವ ನಮ್ಮ ಬಹುತೇಕ ಸಿನಿಮಾಗಳು, ಚಿಣ್ಣರ ಹೆಸರಿನಲ್ಲಿ ಲೋಕದ ದಾರುಣ ಸಂಗತಿಗಳನ್ನೇ ಕೆಟ್ಟುಹೋದ ಗ್ರಾಮಾಫೋನ್‌ನಂತೆ ಪುನರಾವರ್ತಿಸುತ್ತವೆ. ನೀತಿಬೋಧನೆಯ ಉಮೇದಿನಲ್ಲಿ ಮನೋರಂಜನೆ ಹಾಗೂ ಮನೋವಿಕಾಸ ಹಿನ್ನೆಲೆಗೆ ಸರಿಯುತ್ತವೆ. ಬಿಎಫ್‌ಜಿ ಸಿನಿಮಾದಲ್ಲಿ ಕೂಡ ದಾರುಣ ಸಂಗತಿಗಳಿವೆ. ಅನಾಥ ಹುಡುಗಿಯೊಬ್ಬಳ ಬದುಕು ಚಿತ್ರದ ಕೇಂದ್ರವಾಗಿದೆ. ಆದರೆ, ಇದ್ಯಾವುದೂ ಮಕ್ಕಳ ಮನಸ್ಸನ್ನು ತಲ್ಲಣಗೊಳಿಸುವಂತಿಲ್ಲ. ಬಿಎಫ್‌ಜಿ ಮೂಲಕ ಅನಾವರಣಗೊಳ್ಳುವ ರಮ್ಯಲೋಕ ಮಕ್ಕಳ ಮನಸ್ಸನ್ನು ಮುದಗೊಳಿಸುವಂತಿದೆ. ರಕ್ಕಸರ ಜೊತೆಗೆ ಸೋಫಿ ನಡೆಸುವ ಕಣ್ಣಾಮುಚ್ಚಾಲೆಯ ಸಾಹಸಯಾತ್ರೆ ರೋಮಾಂಚಕವಾಗಿದೆ. ಮನವೀಯ ಕನಸುಗಳನ್ನು ನಾಟಬಲ್ಲ ಇದು ದೊಡ್ಡವರೆಲ್ಲ ನೋಡಲೇಬೇಕಾದ ಹಾಗೂ ಮಕ್ಕಳಿಗೆ ತೋರಿಸಬೇಕಾದ ಸಿನಿಮಾ.

‘ಷಿಂಡ್ಲರ್ಸ್ ಲಿಸ್ಟ್’, ‘ಜುರಾಸಿಕ್ ಪಾರ್ಕ್’ನಂಥ ಸಿನಿಮಾಗಳನ್ನು ರೂಪಿಸಿದ, ಸಿನಿಮಾ ವ್ಯಾಕರಣವನ್ನು ಅರೆದುಕುಡಿದಂತೆ ಕಾಣಿಸುವ ಸ್ಪಿಲ್‌ಬರ್ಗ್ ಎನ್ನುವ ನಿರ್ದೇಶಕ ‘ಬಿಎಫ್‌ಜಿ’ಯಂಥ ಮಕ್ಕಳ ಚಿತ್ರವೊಂದನ್ನು ರೂಪಿಸಿರುವುದು ವಿಶೇಷ ಸಂಗತಿ. ಬೌದ್ಧಿಕವಲಯದೊಂದಿಗೆ ಒಡನಾಡಿ ಸೈ ಎನ್ನಿಸಿಕೊಂಡ ವ್ಯಕ್ತಿಯೊಬ್ಬ ಚಿಣ್ಣರಲೋಕದಲ್ಲೂ ತನ್ನನ್ನು ತೊಡಗಿಸಿಕೊಳ್ಳುವುದು ಸಾಧ್ಯವಾಗಿರುವುದರಿಂದಲೇ ಸ್ಪಿಲ್‌ಬರ್ಗ್ ನಮ್ಮ ನಡುವಿನ ಅತ್ಯುತ್ತಮ ನಿರ್ದೇಶಕನಾಗಿದ್ದಾನೆ.

❃